# ವಾರ್ತಾ ವಿಶ್ಲೇಷಣೆ

## ಜ್ಯೋತಿಷ್ಯದ ಭವಿಷ್ಯ

**ಜ್ಯೋತಿಶ್ಶಾಸ್ತ್ರದ** ಬಗ್ಗೆ ಇತ್ತೀಚೆಗೆ ವೃತ್ತಪತ್ರಿಕೆಯಲ್ಲಿ ಬಹಳಷ್ಟು ಓದುತ್ತಿದ್ದೇವೆ. U.G.Cಯವರು ಅದನ್ನು ವಿದ್ಯಾಸಂಸ್ಥೆಗಳಲ್ಲಿ ಪಠ್ಯವಿಷಯವನ್ನಾಗಿ ಮಾಡಲು ನಿರ್ಧರಿಸಿರುವರು. ಅನೇಕ ವಿಚಾರವಾದಿಗಳು ಇದನ್ನು ಪ್ರತಿಭಟಿಸಿದ್ದಾರೆ, ಜ್ಯೋತಿಶ್ಶಾಸ್ತ್ರ ಅವೈಜ್ಞಾನಿಕ ಎಂದು ಅವರು ವಾದಿಸುತ್ತಾರೆ. ಅದು ವೈಜ್ಞಾನಿಕವೊ ಅವೈಜ್ಞಾನಿಕವೊ ಜನಸಾಮಾನ್ಯರು ಅದನ್ನು ಅವೈಜ್ಞಾನಿಕವಾಗಿಯೆ ಬಳಸಿಕೊಳ್ಳುತ್ತಿರುವುದಂತೂ ನಿಜ. ಆತ್ಮವಿಶ್ವಾಸವಿಲ್ಲದವರು ತಮ್ಮ ಭವಿಷ್ಯದ ಬಗ್ಗೆ ಸಂದಿಗ್ಧತೆಯಲ್ಲಿರುವವರು ಜ್ಯೋತಿಷಿಗಳ ಮೊರೆ ಹೋಗುವುದು ಅತ್ಯಂತ ಸಾಮಾನ್ಯ. ಜ್ಯೋತಿಷಿಗಳು ಜನರ ಈ ದೌರ್ಬಲ್ಯದ ಪೂರ್ಣ ಪ್ರಯೋಜನವನ್ನು ಪಡೆಯುತ್ತಿರುವುದೂ ನಿಜ.

ಈ ದೌರ್ಬಲ್ಯವು ಕೇವಲ ವ್ಯಕ್ತಿಗೆ ಮಾತ್ರ ಅನ್ವಯಿಸುವಂತಿದ್ದರೆ ಅಷ್ಟು ಹಾನಿಯಿಲ್ಲ. ಆದರೆ ಇಡೀ ಸಮಾಜಕ್ಕೆ ಅನ್ವಯವಾಗುವಂತಿದ್ದರೆ ಅದರಿಂದ ಆಗುವ ಹಾನಿ ಅಪಾರ. ೧೯೯೯ರಲ್ಲಿ ಉಂಟಾದ ಪ್ರಚಂಡ ಚಂಡಮಾರುತಕ್ಕೆ ಒರಿಸ್ಸಾದಲ್ಲಿ ೨೦,೦೦೦ ಜನರು ಬಲಿಯಾದರಂತೆ. ಇಷ್ಟೊಂದು ಅಪಾರ ಪ್ರಾಣಹಾನಿಗೆ ಜ್ಯೋತಿಷಿಗಳ ಮತ್ತು ರಾಜಕಾರಣಿಗಳ ಬೇಜವಾಬ್ದಾರಿಯೆ ಕಾರಣ ಎಂಬುದು **ಇಂಡಿಯಾ ಟುಡೇ** (*India Today*)ಪತ್ರಿಕೆಯ ಪತ್ರಿಕೋದ್ಯಮಿ ರುಬೇನ್ ಬ್ಯಾನರ್ಜಿಯವರ ದಿ ಒರಿಸ್ಸಾ ಟ್ರ್ಯಾಜಿಡಿ (*The Orissa Tragedy*) ಎಂಬ ಪುಸ್ತಕದಿಂದ ತಿಳಿದುಬರುತ್ತದೆ. ಚಂಡಮಾರುತವು ಒರಿಸ್ಸವನ್ನು ತಾಕುವುದಕ್ಕೆ ಮೂರುದಿನ ಮುಂಚೆಯೇ ಹವಾಮಾನ ತಜ್ಞರು ಅದರ ಬಗ್ಗೆ ಎಚ್ಚರಿಕೆ ನೀಡಿದ್ದರಂತೆ. ಮುಖ್ಯ ಮಂತ್ರಿಗಳಾದ ಗಿರಿಧರ ಗಮಾಂಗರು ಅತ್ಯಂತ ವಿಶಿಷ್ಟವಾದ ಮುನ್ನೆಚ್ಚರಿಕೆಯ ಕ್ರಮವನ್ನು ತೆಗೆದುಕೊಂಡರು. ಅದೇನೆಂದರೆ, ಅವರು ಪ್ರಸಿದ್ಧ ಜ್ಯೋತಿಶ್ಶಾಸ್ತ್ರಜ್ಞರನ್ನು ಕರೆಸಿ, ಚಂಡಮಾರುತವನ್ನು ಹೋಗಲಾಡಿಸಲು ದೇವತೆಗಳಿಗೆ ವಿಶೇಷ ಪೂಜೆ ಹವನಗಳನ್ನು ನಡೆಸಿದರು. ರಾತ್ರಿಯೆಲ್ಲಾ ಇದು ನಡೆಯಿತು, ಮುಖ್ಯಮಂತ್ರಿಗಳೂ ಜಾಗರಣೆ ಮಾಡಿದರು. ಚಂಡಮಾರುತವು ಹೊಡೆದು ದೂರವಾಣಿ ಸಂಪರ್ಕವನ್ನೂ ವಿದ್ಯುತ್ ಸಂಪರ್ಕವನ್ನೂ ಕಡಿದು ಹಾಕುತ್ತಿರುವಾಗ ಈ ಸರ್ವಜ್ಞ ಪಂಡಿತರು ಯಾವ ಭಯವೂ ಇಲ್ಲವೆಂದು ಮುಖ್ಯಮಂತ್ರಿಗಳಿಗೆ ಭರವಸೆ ನೀಡುತ್ತಿದ್ದರಂತೆ. ಗಮಾಂಗರ ನಕ್ಷತ್ರ ರಾಜ್ಯವನ್ನು ರಕ್ಷಿಸುತ್ತದೆ ಎಂದು ಒಬ್ಬರು ಹೇಳಿದರಂತೆ. ಇನ್ನೊಬ್ಬರು ಚಂಡಮಾರುತವು ಒರಿಸ್ಸಾದ ಮೇಲೆ ಹಾದುಹೋಗುತ್ತದೆ, ಒರಿಸ್ಸಾವನ್ನು ತಾಕುವುದೇ ಇಲ್ಲ ಎಂದರಂತೆ. ಆದರೆ ಜ್ಯೋತಿಷಿಗಳು ಮಾಡಿದ ಪೂಜೆ ಹವನಗಳಾಗಲಿ, ಗಮಾಂಗರ ನಕ್ಷತ್ರವಾಗಲಿ ಜನರನ್ನು ರಕ್ಷಿಸಲೇ ಇಲ್ಲ. "ಯಾರು ತಮಗೆ ತಾವೇ ಸಹಾಯ ಮಾಡಿಕೊಳ್ಳುವರೊ ಅವರಿಗೆ ದೇವರೂ ಸಹಾಯ ಮಾಡುತ್ತಾನೆ."(God helps those who help them -selves). ಏನೇ ಆದರೂ ಜ್ಯೋತಿಷ್ಯದ ಭವಿಷ್ಯ ಗಟ್ಟಿಯಾಗಿಯೇ ಇದೆ.

☆

## "ನೀರೇ ನಾರಾಯಣ"

**ಆಪೋ ನಾರಾಯಣಃ**—ಎಂಬ ಶಾಸ್ತ್ರವಾಕ್ಯವಿದೆ. ನೀರನ್ನೇ ದೇವರೆಂದು ನಾವು ಪೂಜಿಸುತ್ತೇವೆ. ನದಿಗಳನ್ನು ದೇವರೆಂದು ಪೂಜಿಸುತ್ತೇವೆ. ಹೀಗೆ ನಾವು ಎಲ್ಲವನ್ನೂ ಪೂಜಿಸುವುದರಲ್ಲಿ ನಿಸ್ಸೀಮರು. ಆದರೆ ಪೂಜೆ ಕೇವಲ ರಿಚುವಲ್ ಆಗಿ ಪೂಜ್ಯ ಭಾವನೆ ಹೊರಟುಹೋಗಿರುತ್ತದೆ. ನದಿಯನ್ನು ಪೂಜಿಸಿ ಅದಕ್ಕೆ ಎಲ್ಲ ಕೊಳೆಯನ್ನು ಸೇರಿಸುತ್ತೇವೆ. ನಮ್ಮ ಪಾಲಿಗೆ ಅದೂ ಒಂದು ಪೂಜೆಯೆ! ಜನರಲ್ಲಿ ಸಾಮಾಜಿಕ ಪ್ರಜ್ಞೆ ಮತ್ತು ಜಾಗತಿಕ ಪ್ರಜ್ಞೆ ಕಡಮೆಯಾದಷ್ಟೂ ಪರಿಸರಪ್ರಜ್ಞೆಯೂ ಕಡಮೆಯಾಗುತ್ತದೆ. ನಾವು ನಮಗಾಗಿ ಮಾತ್ರ ಬಾಳುವುದನ್ನು ಬಿಟ್ಟು, ಕೇವಲ ಪ್ರಸ್ತುತ-ಪ್ರಜ್ಞೆಯನ್ನು ತೊರೆದು, ಇತರರಿಗಾಗಿಯೂ ಬಾಳುವುದನ್ನು ಕಲಿತರೆ ಆಗ ಈ ಸಮಸ್ಯೆಯನ್ನು ಪರಿಹರಿಸಬಹುದು. ಭುಂಜತೇ ತೇ ತ್ವಘಂ ಪಾಪಾ **ಯೇ ಪಚಂತ್ಯಾತ್ಮಕಾರಣಾತ್** (ಯಾರು ತಮಗಾಗಿ ಮಾತ್ರ ಅಡುಗೆ ಮಾಡಿಕೊಳ್ಳುತ್ತಾರೊ ಅವರು ಪಾಪವನ್ನೇ ಉಣ್ಣುತ್ತಾರೆ) ಎಂಬ ಗೀತೋಕ್ತಿಯು ತುಂಬ ಅರ್ಥಪೂರ್ಣವಾಗಿದೆ.

ಈ ಭೂಮಿ ನಾಲ್ಕನೇ ಮೂರು ಭಾಗದಷ್ಟು ನೀರಿನಿಂದ ಆವೃತವಾಗಿದ್ದರೂ ಅದರಲ್ಲಿ ಕೇವಲ ಶೇಕಡ ೨.೫ರಷ್ಟು ಮಾತ್ರ ಉಪಯೋಗಿಸಬಲ್ಲ ಶುದ್ಧ ನೀರು. ಇದರಲ್ಲಿಯೂ ಹೆಚ್ಚಿನ ಭಾಗ ಮಂಜು ಮತ್ತು ಹಿಮದ ರೂಪದಲ್ಲಿ ಇರುವುದರಿಂದ ನಮ್ಮ ಪಾಲಿಗೆ ದಕ್ಕದಾಗಿದೆ. ನಮ್ಮ ಪಾಲಿಗೆ ದೊರೆಯುವ ನೀರು ಶೇಕಡ ೦.೬ ರಷ್ಟು ಮಾತ್ರ. ಇದರಲ್ಲಿಯೂ ಶೇಕಡ ೭೦ರಷ್ಟು ವ್ಯವಸಾಯಕ್ಕೂ, ಶೇಕಡ ೨೦ರಷ್ಟು ಕೈಗಾರಿಕೆಗಳಿಗೂ ಉಪಯೋಗಿಸಲ್ಪಟ್ಟು ಮನೆಬಳಕೆಗೆ ಉಪಯೋಗಿಸಲ್ಪಡುವುದು ಕೇವಲ ಶೇ ೧೦. ದಿನದಿನಕ್ಕೂ ಜನಸಂಖ್ಯೆಯ ವೃದ್ಧಿಯಿಂದಾಗಿ, ನಾಗರಿಕತೆಯ ಬೆಳವಣಿಗೆಯಿಂದಾಗಿ ನೀರಿನ ಬೇಡಿಕೆ ಜಾಸ್ತಿಯಾಗುತ್ತಿದೆ. ಆದರೆ ಬಳಕೆಯೋಗ್ಯ ನೀರಿನ ಮೊತ್ತ ಕಡಮೆಯಾಗುತ್ತಿದೆ. ಸಿಗುವ ನೀರನ್ನೂ ನಾವು ಮಲಿನಗೊಳಿಸುತ್ತಿದ್ದೇವೆ, ಮತ್ತು ನೀರಿಗಾಗಿ ನಡೆಯುವ ಜಗಳದಿಂದ ಎಷ್ಟೋ ನೀರು ವ್ಯರ್ಥವಾಗುತ್ತದೆ. ನೀರು ಆಹಾರಗಳಿಗಿಂತ ನಮಗೆ ಜಗಳವೆ ಪ್ರಧಾನವಾಗಿದೆ. ಆದರೆ ಜಗಳ ಕಾಯುವುದಕ್ಕೂ ನಮಗೆ ಆಹಾರ ನೀರು ಬೇಕು ಎಂಬುದನ್ನೂ ಮರೆತುಬಿಡುತ್ತೇವೆ!

೨೧ನೇ ಶತಮಾನದಲ್ಲಿ, ಭೂಮಿಯ ಶಾಖಾಧಿಕ್ಯದ ಸಮಸ್ಯೆಯನ್ನು ಬಿಟ್ಟರೆ ನಾವು ಎದುರಿಸಬೇಕಾದ ಎರಡನೆಯ ಅತ್ಯಂತ ದೊಡ್ಡ ಸಮಸ್ಯೆ ಎಂದರೆ ನೀರಿನ ಅಭಾವ ಎಂದು ಟೈಮ್ (*TIME*)ಪತ್ರಿಕೆ ವರದಿ ಮಾಡುತ್ತದೆ. ಒಂದು ಕಡೆ ಉಷ್ಣದ ತೀಕ್ಷ್ಣತೆ, ಇನ್ನೊಂದು ಕಡೆ ನೀರಿನ ಕೊರತೆ—ಹೀಗೆ ಎರಡೂ ಸಮಸ್ಯೆಗಳು ಒಂದಕ್ಕೊಂದು ಪೂರಕವಾಗಿ ಮಾನವನನ್ನು ಒಣಗಿಸಿ ಬಿಡುತ್ತವೆಯೇನೊ! ಭೂಮಿಯ ಬಿಸಿ ಏರಿದಂತೆ ಮಾನವನ ತಲೆ ಬಿಸಿಯೂ ಜಾಸ್ತಿಯಾಗುತ್ತಿದೆ ಮತ್ತು ಹೃದಯ "ತಣ್ಣ"ಗಾಗುತ್ತಿದೆ. ಭೂಮಿಯ ಬಿಸಿ ಹೃದಯವನ್ನು "ಬೆಚ್ಚಗೆ" ಮಾಡಿದರೆ ನೀರಿನ ಸಮಸ್ಯೆ "ಕರಗಿ ನೀರಾಗಿ" ಹೋಗುತ್ತದೆ.

☆

## ಕಥೋಪದೇಶ

# ಕತ್ತರಿ ಮತ್ತು ಸೂಜಿ

**ಒಂದು** ಊರಿನಲ್ಲಿ ಒಬ್ಬ ದರ್ಜಿಯವನಿದ್ದನು. ಬಟ್ಟೆ ಹೊಲಿದು ಜೀವನ ನಡೆಸುತ್ತಿದ್ದನು. ಪ್ರಾಮಾಣಿಕ, ಅಲ್ಪ ಸಂತೃಪ್ತ, ದೈವಭಕ್ತ, ಸಾಧು ಸಂತರು, ಹಿರಿಯರಲ್ಲಿ ಗೌರವ. ತಾನು ಮಾಡುವ ಪ್ರತಿ ಕೆಲಸವೂ ಭಗವಂತನಿಗೆ ಸಲ್ಲತಕ್ಕ ಸೇವೆಯೆಂದು ತಿಳಿದಿದ್ದ. ಸರಳ ಜೀವಿ. ಜನಪ್ರಿಯ ವ್ಯಕ್ತಿಯಾಗಿದ್ದನು.

ಒಂದು ದಿನ ಒಬ್ಬ ಸಾಧುಗಳು ಇವನ ಅಂಗಡಿಗೆ ಬಂದರು. ಎದ್ದು ನಿಂತು ಆದರದಿಂದ ಬರಮಾಡಿಕೊಂಡು ಪ್ರಣಾಮ ಮಾಡಿ ಆಸನ ಕೊಟ್ಟು ಕುಳ್ಳಿರಿಸಿದನು. ವಿನಯದಿಂದ "ತಮ್ಮ ಪಾದಧೂಳಿಯಿಂದ ನನ್ನ ಅಂಗಡಿ ಪಾವನವಾಯಿತು. ಅಲ್ಪನಾದ ನಾನು ತಮಗೆ ಏನು ತಾನೇ ಕೊಡಬಲ್ಲೆ. ದಯವಿಟ್ಟು ಏನು ಸೇವೆ ಮಾಡಲಿ? ಅಪ್ಪಣೆ ಕೊಡಿಸಬೇಕು" ಎಂದನು.

ಸಾಧುಗಳು : ಬಹಳ ಸಂತೋಷ. ದೇವರು ನಿನಗೆ ಒಳ್ಳೆಯದು ಮಾಡಲಿ. ಬಿಸಿಲು ಬಹಳವಾಗಿದೆ. ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು ನನ್ನ ಪ್ರಯಾಣವನ್ನು ಮುಂದುವರಿಸುತ್ತೇನೆ. ಅಷ್ಟೆ.

ದರ್ಜಿ: ದಯಮಾಡಿ ನನಗೆ ಏನಾದರೂ ಉಪದೇಶ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಸಾಧುಗಳು : ನಿನ್ನ ಬಳಿ ಇರುವ ಕತ್ತರಿ ಮತ್ತು ಸೂಜಿಯನ್ನು ತೆಗೆದುಕೊಂಡು ಬಾ.

ದರ್ಜಿಗೆ ಅಚ್ಚರಿ! ಉಪದೇಶ ಮಾಡಿ ಎಂದರೆ ಕತ್ತರಿ, ಸೂಜಿಯನ್ನು ಕೇಳುತ್ತಾರೆ. ಏನೋ ಹೊಸರೀತಿಯ ಕೆಲಸ ಹೇಳಿಕೊಡಬಹುದು. ಮಹಾತ್ಮರ ರೀತಿ ಯಾರಿಗೆ ಗೊತ್ತು? ಎಂದು ಯೋಚಿಸಿ, ಕತ್ತರಿ ಮತ್ತು ಸೂಜಿ ತಂದುಕೊಟ್ಟನು.

ಸಾಧುಗಳು ಅಲ್ಲಿದ್ದ ಒಂದು ಹೊಸ ಬಟ್ಟೆಯ ತುಂಡನ್ನು ತೆಗೆದುಕೊಂಡು ಕತ್ತರಿಸಿ ಚೂರು-ಚೂರು ಮಾಡಿದರು. ದರ್ಜಿಗೆ ಒಂದು ಕಡೆ ಕಳವಳ ಹೊಸ ಬಟ್ಟೆ ಚೂರುಚೂರಾಯಿತಲ್ಲಾ ಎಂದು, ಇನ್ನೊಂದು ಕಡೆ ಆಶ್ಚರ್ಯ! ಸೂಜಿಯನ್ನು ತೆಗೆದುಕೊಂಡು ದಾರಪೋಣಿಸಿ ಕತ್ತರಿಸಿ ಹಾಕಿದ್ದ ಬಟ್ಟೆಯ ಚೂರನ್ನು ಸೇರಿಸಿ ಹೊಲಿಯತೊಡಗಿದರು. ದರ್ಜಿ ಬೆಪ್ಪಾಗಿ ನಿಂತಿದ್ದ.

ಸಾಧುಗಳು : ಅಯ್ಯಾ, ಕತ್ತರಿ ಕೆಲಸ ಹಾಗೂ ಸೂಜಿ ಕೆಲಸ ಏನು ಎಂದು ನಿನಗೆ ಗೊತ್ತಿದೆ ಅಲ್ಲವೆ? ಈಗ ನಾನು ಮಾಡಿದ್ದೂ ಅದೇ ತಾನೆ! ಆದರೆ ನೀನು ಒಂದು ಅಳತೆ, ಆಕಾರ ಇಟ್ಟುಕೊಂಡು ಕತ್ತರಿಸಿ ಹೊಲಿಯುತ್ತೀಯ. ನಾನು



ಕಲೆ : ಪ್ರಕಾಶ ಚಿಕ್ಕಪಾಳ್ಯ

ಮಾಡಿದ್ದು "ಅರ್ಥ"ವಿಲ್ಲದ್ದು ಎಂದು ತಾನೆ ನೀನು ಯೋಚಿಸುತ್ತ ನಿಂತಿದ್ದೀಯ. ಈಗ ಹೇಳು ಕತ್ತರಿಗೆ ಎಷ್ಟು ಕಿವಿ?

ದರ್ಜಿ ಕಕ್ಕಾಬಿಕ್ಕಿಯಾದನು. ಆದರೆ ಅವನು ಬುದ್ಧಿವಂತ. "ಎರಡು" ಎಂದನು.

ಸಾಧುಗಳು : ಸೂಜಿಗೆ ಕಣ್ಣೆಷ್ಟು?

ದರ್ಜಿ : ಒಂದು.

ಸಾಧುಗಳು : ಸರಿ "ಎರಡು ಕಿವಿ" ಗಳಿಂದ ಕೇಳಿದ ಮಾತನ್ನು ನಂಬಿ "ಕತ್ತರಿ"ಕೆಲಸ ಮಾಡುತ್ತೇವೆ. "ಒಂದೇ ಕಣ್ಣಾ"ದರೂ "ಅಲ್ಪ"ವಾದ ದಾರದ ಸಹಾಯದಿಂದ "ಕತ್ತರಿ" ಸಿದ್ದನ್ನು ಜೋಡಿಸಬಹುದು. ಮನುಷ್ಯ "ಕತ್ತರಿ" ಕೆಲಸ ಮಾಡಬಾರದು. ಕಣ್ಣಿನಿಂದ ನೋಡಿ, ಸಾಧ್ಯವಾದಷ್ಟು ಜೋಡಿಸುವ ಕೆಲಸ ಮಾಡಬೇಕು.

ದರ್ಜಿ ಸಾಧುಗಳು ಉಪದೇಶಿಸಿದ ರೀತಿಯಿಂದ ಬಹಳ ಪ್ರಭಾವಿತನಾದನು. ಪ್ರಣಾಮ ಸಲ್ಲಿಸಿದನು. ಸಾಧುಗಳು ಸ್ವಲ್ಪಕಾಲ ವಿಶ್ರಮಿಸಿ ಪ್ರಯಾಣ ಮುಂದುವರೆಸಿದರು.

**ನೀತಿ :** ***ಹೇಳಿಕೆ ಮಾತಿಗೆ ಕಿವಿಗೊಟ್ಟು ಪರರ ಜೀವನ ಹಾಳು ಮಾಡಬಾರದು. ನಮ್ಮ ಕೈಲಾಗದಿದ್ದರೆ ಮತ್ತೊಬ್ಬರ ಸಹಾಯ ಪಡೆದಾದರೂ "ಜೀವನ"ವನ್ನು ಉದ್ಧಾರ ಮಾಡಲು ಪ್ರಯತ್ನಿಸಬೇಕು.*** (ಸಂಗ್ರಹ : ಶ್ರೀಮತಿ ಮಂಗಳಮ್ಮ)